0401/0801

IV Semester 3 Years LL.B./VIII Semester 5 Years B.A. LL.B./B.B.A. LL.B. Examination, June/July 2015
PUBLIC INTERNATIONAL LAW

Duration : 3 Hours Max. Marks : 100

Instructions : 1. Answer Q. No. **9** and **any five** of the **remaining**.
2. Question No. **9** carries **20** marks and the **remaining** question carry **16** marks **each**.
3. Answer should be written **either** in **English** or **Kannada completely**.

ಸೂಚನೆಗಳು : 1. ಪ್ರಶ್ನೆ ಸಂಖ್ಯೆ **9** ಮತ್ತು ಉಳಿದ ಯಾವುದೇ **ಐದು** ಪ್ರಶ್ನೆಗಳಿಗೆ ಉತ್ತರಿಸಿ.
2. ಪ್ರಶ್ನೆ ಸಂಖ್ಯೆ **9** ಕ್ಕೆ **20** ಅಂಕಗಳು ಮತ್ತು ಉಳಿದ **ಪ್ರತಿ** ಪ್ರಶ್ನೆಗೆ **16** ಅಂಕಗಳು.
3. ಉತ್ತರವನ್ನು ಸಂಪೂರ್ಣವಾಗಿ **ಇಂಗ್ಲೀಷಿನಲ್ಲಿ** ಅಥವಾ **ಕನ್ನಡದಲ್ಲಿ** ಬರೆಯಬೇಕು.

Q. No. 1. Explain the theories relating to relationship between International Law and Muncipal Law. Marks : 16

ಅಂತರರಾಷ್ಟ್ರೀಯ ಕಾನೂನು ಹಾಗೂ ದೇಶಿಯ ಕಾನೂನಿನ ಮಧ್ಯೆ ಇರುವ ಸಂಬಂಧಕ್ಕೆ ಸಂಬಂಧಿಸಿದ ಸಿದ್ಧಾಂತಗಳನ್ನು ವಿವರಿಸಿ.

Q. No. 2. What are the sources of International Law ? Explain how decisions of International Institution as a source of International Law. Marks : 16

ಅಂತರರಾಷ್ಟ್ರೀಯ ಕಾನೂನಿನ ಮೂಲಗಳು ಯಾವುವು ? ಅಂತರರಾಷ್ಟ್ರೀಯ ಸಂಸ್ಥೆಗಳ ತೀರ್ಪುಗಳು ಹೇಗೆ ಅಂತರರಾಷ್ಟ್ರೀಯ ಕಾನೂನಿನ ಮೂಲ ಎಂಬುದನ್ನು ವಿವರಿಸಿ.

Q. No. 3. What is 'Recognition' ? Explain the legal effects of recognition of a new state. Marks : 16

'ಮನ್ನಣೆ' ಎಂದರೇನು ? ಹೊಸ ದೇಶದ ಮಾನ್ಯತೆಯಿಂದ ಉಂಟಾಗುವ ಕಾನೂನು ಪರಿಣಾಮಗಳನ್ನು ವಿವರಿಸಿ.

Q. No. 4. Discuss the Jurisdiction of maritime state over coastal waters. Marks : 16

ಕಡಲ ತೀರದ ರಾಷ್ಟ್ರಗಳಿಗೆ ಕಡಲ ತೀರದ ಸಮುದ್ರದ ಮೇಲಿರುವ ನ್ಯಾಯಾಧಿಕಾರದ ವ್ಯಾಪ್ತಿಯನ್ನು ಚರ್ಚಿಸಿ.

P.T.O.

Q. No. 5. What is 'Nationality' ? Explain the international importance of Nationality. Marks : 16

'ರಾಷ್ಟ್ರೀಯತೆ' ಎಂದರೇನು ? ರಾಷ್ಟ್ರೀಯತೆಯ ಅಂತರರಾಷ್ಟ್ರೀಯ ಪ್ರಾಮುಖ್ಯತೆಯನ್ನು ವಿವರಿಸಿ.

Q. No. 6. Define the term "Treaty". Explain termination of treaties. Marks : 16

'ಒಪ್ಪಂದ' ಎಂಬ ಪದವನ್ನು ವ್ಯಾಖ್ಯಾನಿಸಿ. ಒಪ್ಪಂದಗಳ ಕೊನೆಗೊಳ್ಳುವಿಕೆಯನ್ನು ವಿವರಿಸಿ.

Q. No. 7. Explain the functions and powers of Security Council. Marks : 16

ಭದ್ರತಾ ಮಂಡಳಿಯ ಪ್ರಕಾರ್ಯಗಳು ಮತ್ತು ಅಧಿಕಾರವನ್ನು ವಿವರಿಸಿ.

Q. No. 8. Write short note **any two** of the following. Marks : 2×8=16

ಈ ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ.

(a) Exclusive economic zone
ಪ್ರತ್ಯೇಕ ಆರ್ಥಿಕ ವಲಯ

(b) International Labour Organisation
ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ

(c) Principle involved in the 'Lotus Case'
'ದಿ ಲೊಟಸ್ ಪ್ರಕರಣ'ದಲ್ಲಿ ಅಡಕವಾಗಿರುವ ತತ್ವ.

Q. No. 9. Solve **any two** of the following problems. Marks : 2×10=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಗೆಹರಿಸಿ.

(a) Mr. 'Pinto' was a clerk at Indian Embassy in England. He was dismissed from service on the charge of stealing documents. On the same day, the Indian Ambassador waived his immunites in this respect. Mr. Pinto was arrested and tried. He claimed that being a servant of diplomatic envoy he was immuned from the court proceedings. Whether he succeed in this case ? Give reason.

ಶ್ರೀಯುತ ಪಿಂಟೋರವರು ಇಂಗ್ಲೆಂಡಿನ ಭಾರತೀಯ ರಾಯಭಾರಿ ಕಛೇರಿಯಲ್ಲಿ ಗುಮಾಸ್ತನಾಗಿದ್ದು ಅವರನ್ನು ಕೆಲವು ದಾಖಲೆಗಳನ್ನು ಕಳವು ಮಾಡಿರುವ ಆರೋಪದ ಮೇಲೆ ಸೇವೆಯಿಂದ ವಜಾಮಾಡಲಾಯಿತು. ಅದೇ ದಿನ ಭಾರತೀಯ ರಾಯಭಾರಿ ಕಛೇರಿಯು ಅವರಿಗೆ ಇದ್ದ ಉನ್ಮುಕ್ತಿಯನ್ನು ರದ್ದು ಮಾಡಲಾಯಿತು. ಅವರನ್ನು ದಸ್ತಗಿರಿ ಮಾಡಿ ನ್ಯಾಯಿಕ ವಿಚಾರಣೆಗೆ ಒಳಪಡಿಸಲಾಯಿತು. ಅವರು ವಿದೇಶಿ ರಾಯಭಾರಿ ಕಛೇರಿ ನೌಕರನಾಗಿದ್ದು ನ್ಯಾಯಲಯದ ವಿಚಾರಣೆಯಿಂದ ಉನ್ಮುಕ್ತಿಯಿದೆ ಎಂದು ಸಮರ್ಥಿಸುತ್ತಾರೆ. ಅವರು ಜಯಗಳಿಸುವರೇ ? ಕಾರಣಕೊಡಿ.

(b) Three Indian fisherman involved in a case of alleged drug trafficking in Sri Lanka. They were arrested by the Sri Lankan Navy. The Colombo High Court awarded death penalty to three Indian fisherman. Now can Indian Diplomatic envoys release these three Indian fisherman ? Give reason.

ಮೂರು ಭಾರತೀಯ ಮೀನುಗಾರರು ಶ್ರೀಲಂಕದಲ್ಲಿ ಮಾದಕ ಔಷಧ ಸಾಗಣೆ ಆರೋಪದ ಕೆಳಗೆ, ಶ್ರೀಲಂಕಾದ ನೌಕಸೈನ್ಯದ ಅಧಿಕಾರಿಗಳು ಅವರನ್ನು ಬಂಧಿಸಿದರು. ಕೊಲೊಂಬೊ ಉಚ್ಚನ್ಯಾಯಾಲಯದಿಂದ ಆ ಮೂವರು ಭಾರತೀಯ ಮೀನುಗಾರರಿಗೆ ಮರಣ ದಂಡನೆ ನೀಡಲಾಗಿದೆ. ಭಾರತೀಯ ರಾಯಭಾರಿಗಳು ಆ ಮೂವರು ಭಾರತೀಯ ಮೀನುಗಾರರನ್ನು ಬಿಡುಗಡೆಗೊಳಿಸಬಹುದೇ ? ಕಾರಣ ಕೊಡಿ.

(c) A team of USA military troop was on the ground in Iraq against the Jihadists. Is USA violated any rule of International Law ? Give reason.

ಅಮೇರಿಕ ಸಂಯುಕ್ತ ಸಂಸ್ಥಾನ ತನ್ನ ಸೈನಿಕ ತಂಡವನ್ನು ಇರಾಕ್ ಭೂ-ಭಾಗದ ಮೇಲೆ ಜಿಹಾದಿ ವಿರುದ್ಧ ಹೋರಾಡಲು ನೆಲೆಸಿದ್ದರು. ಅಮೇರಿಕ ಸಂಯುಕ್ತ ಸಂಸ್ಥಾನ ಯಾವುದಾದರೂ ಅಂತರರಾಷ್ಟ್ರೀಯ ನಿಯಮವನ್ನು ಉಲ್ಲಂಘನೆ ಮಾಡಿದೆಯೇ ? ಕಾರಣಕೊಡಿ.
